# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 124 | Pages. 2 | Date: 18-04-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 124 - ಪುಟಗಳು : 2 | 18-04-2026 | ಶನಿವಾರ | Ph: 8762954248 | ದರ : ₹1


## ಸಹಬಾಳ್ವೆಯ ಜೀವನ ಎಲ್ಲರ ಆದ್ಯತೆಯಾಗಲಿ

### ಅಬ್ಬೂರು ಮಾಚಗೋಡನಹಳ್ಳಿಗೆ ಡಿಸಿ ಭೇಟಿ | ಸ್ಥಳೀಯರೊಂದಿಗೆ ಸಮಾಲೋಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಏನೇ ಸಮಸ್ಯೆ ಇದ್ದರೂ ಅಧಿಕಾರಿಗಳು ಭೇಟಿ ನೀಡಿ ಸಲಹೆ ಸೂಚನೆ ನೀಡಬಹುದೇ ಹೊರತು ಅಂತಿಮ ತೀರ್ಮಾನ ಗ್ರಾಮಸ್ಥರದ್ದೇ ಆಗಿರುತ್ತದೆ. ಸಹಬಾಳ್ವೆಯ ಜೀವನ ಎಲ್ಲರ ಆದ್ಯತೆಯಾಗಲಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹೇಳಿದರು.

ತಾಲ್ಲೂಕಿನ ಅಬ್ಬೂರು ಮಾಚಗೋಡನಹಳ್ಳಿಗೆ ಶುಕ್ರವಾರ ಭೇಟಿ ನೀಡಿ ಗ್ರಾಮದಲ್ಲಿ ತಾಲ್ಲೂಕು ಆಡಳಿತ ಕೈಗೊಂಡಿರುವ ಅನಧಿಕೃತ ಶೆಡ್ ತೆರವು ಕಾರ್ಯಚರಣೆ ಕುರಿತು ಪರಿಶೀಲಿಸಿ ಮಾತನಾಡಿದರು.

ಗ್ರಾಮಕ್ಕೆ ಅಧಿಕಾರಿಗಳು ಬಂದು ಸಭೆ ನಡೆಸಿ ಹೋಗಬಹುದು. ಅಂತಿಮವಾಗಿ ವಾಸ ಮಾಡುವ ಜನರು ಹೊಂದಿಕೊಂಡು ಹೋಗುವ ಕೆಲಸ ನಿಮ್ಮದೇ ಆಗಿರುತ್ತದೆ. ತುಂಬಾ ಪ್ರಬುದ್ಧತೆಯಿಂದ ನಡೆದುಕೊಳ್ಳಬೇಕಿದೆ ಹಾಗೂ ಊರು, ಜನಗಳ ಬಗ್ಗೆ ಕಳಕಳಿ ಸಹ ಇರಬೇಕಾಗುತ್ತದೆ. ಇಲ್ಲಿನ ಎಲ್ಲಾ ಸಮಸ್ಯೆಗೆ ಪರಿಹಾರ ಕೂಡ ಕಂಡುಕೊಳ್ಳಬೇಕಿದೆ. ಗ್ರಾಮದಲ್ಲಿ ಉಂಟಾಗಿರುವ ಸಮಸ್ಯೆಯನ್ನು ಖುದ್ದು ಪರಿಶೀಲನೆ ನಡೆಸಿ ಪ್ರತ್ಯೇಕವಾಗಿ ಆಲಿಸಿದ್ದೇನೆ. ಅರ್ಹರಿಗೆ ಯಾವುದೇ ತೊಂದರೆ ಆಗುವ ಸಾಧ್ಯತೆ ಇಲ್ಲ. ಕೂಡಲೇ ತಾಲ್ಲೂಕು ಕಚೇರಿಗೆ ತೆರಳಿ ಸರ್ವೆ ನಂ. 94ರ ಸರ್ಕಾರಿ ಗೋಮಾಳ ಮಂಜೂರಾತಿ, ಹಾಲಿ ಅನುಭವದಲ್ಲಿರುವವರ ಬಗ್ಗೆ ಪರಿಶೀಲನೆ ನಡೆಸಿ ಈ ಹಿಂದೆ ಗ್ರಾಮ ಠಾಣೆಗೆ ಮೀಸಲಿಟ್ಟಿರುವ ಜಾಗದ ಬಗ್ಗೆಯೂ ಕೂಡ ಕಂದಾಯ ದಾಖಲೆಗಳನ್ನು ಖಾತ್ರಿ ಮಾಡುವ ಜೊತೆಗೆ ನ್ಯಾಯಯುತವಾಗಿ ಸಮಸ್ಯೆಗೆ ಪರಿಹಾರ ದೊರಕಿಸುವ ವಿಶ್ವಾಸ ಇಲ್ಲಿಗೆ ಭೇಟಿ ನೀಡಿದ ವೇಳೆ ಕಂಡುಬಂದಿದೆ ಎಂದರು.

ಅಬ್ಬೂರು ಮಾಚಗೋಡನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಜಮೀನಿನ ದಾಖಲೆಯನ್ನು ಪರಿಶೀಲಿಸಿ, ಈ ಹಿಂದೆ ಆಗಿರುವ ಮತ್ತು ಮುಂದೆ ಆಗಬೇಕಿರುವ ಕಾನೂನಾತ್ಮಕ ಕ್ರಮವನ್ನು ಕೈಗೊಳ್ಳಬೇಕಿದೆ.

ಮೊದಲು ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಮೂಡಬೇಕಿದೆ. ಈ ಹಂತದಲ್ಲಿ ಯಾರು ಕೂಡ ಕಾನೂನು ಉಲ್ಲಂಘನೆಯಾಗದ ರೀತಿ ನಡೆದುಕೊಳ್ಳಬೇಕೆಂದು ಅವರು ನಿವಾಸಿಗಳಿಗೆ ತಿಳಿ ಹೇಳಿದರು.

ಗ್ರಾಮದ ಹಲವರಿಗೆ 35 ವರ್ಷಗಳ ಹಿಂದೆ ಹಕ್ಕುಪತ್ರ ನೀಡಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಆದರೆ ಆರೇಳು ತಿಂಗಳಿಂದ ಸಮಸ್ಯೆ ಉಂಟಾಗಿದೆ. ಏಕೆ ಇಷ್ಟು ವರ್ಷ ಹಕ್ಕುಪತ್ರ ಪಡೆದು ಸುಮ್ಮನಿದ್ದೀರಿ. ಇಷ್ಟು ವರ್ಷ ಸುಮ್ಮನಿರುವ ನಿಮಗೆ ಒಂದಷ್ಟು ದಿನ ಇರಲು ಆಗುವುದಿಲ್ಲವೇ. ನಿಮ್ಮ ಮನವಿ ಮೇರೆಗೆ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಅವರಿಗೆ ಸೂಚನೆ ನೀಡಿ ಪರಿಶೀಲನೆ ಮಾಡಿ ವರದಿ ನೀಡುವಂತೆ ತಿಳಿಸಿದ್ದೇನೆ. ಮತ್ತೆ ಗೋಮಾಳ ಜಮೀನಿಗೆ ಅರ್ಜಿ ಸಲ್ಲಿಸಿ ಉಳುಮೆ ಮಾಡಿಕೊಂಡು ಸಹ ಬರುತ್ತಿದ್ದಾರೆ. ಅದನ್ನು ಸಹ ಪರಿಶೀಲನೆ ಮಾಡಬೇಕಿದೆ ಎಂದು ಜನರಿಗೆ ಮನವರಿಕೆ ಮಾಡಿದರು.



> ಅಬ್ಬೂರು ಮಾಚಗೋಡನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಜಮೀನಿನ ದಾಖಲೆಯನ್ನು ಪರಿಶೀಲಿಸಿ, ಈ ಹಿಂದೆ ಆಗಿರುವ ಮತ್ತು ಮುಂದೆ ಆಗಬೇಕಿರುವ ಕಾನೂನಾತ್ಮಕ ಕ್ರಮವನ್ನು ಕೈಗೊಳ್ಳಬೇಕಿದೆ. ಮೊದಲು ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಮೂಡಬೇಕಿದೆ.
>
> – ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ

## 50 ಲಕ್ಷ ರೂ. ವೆಚ್ಚದಲ್ಲಿ ಕ್ರಾಫರ್ಡ್ ಆಸ್ಪತ್ರೆಗೆ ಸುಸಜ್ಜಿತ ಲ್ಯಾಬ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಜನಸಾಮಾನ್ಯರಿಗೆ ಇನ್ನಷ್ಟು ಸುಲಭ, ವೇಗ ಹಾಗೂ ಸಮಗ್ರ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಪಟ್ಟಣದ ಕ್ರಾಫರ್ಡ್ ಆಸ್ಪತ್ರೆ ಆವರಣದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ನೂತನ ಪ್ರಯೋಗಾಲಯ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಪಟ್ಟಣದ ಕ್ರಾಫರ್ಡ್ ಆಸ್ಪತ್ರೆ ಆವರಣದಲ್ಲಿ ನೂತನ ಪ್ರಯೋಗಾಲಯ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹಲವು ಪ್ರಮುಖ ವೈದ್ಯಕೀಯ ಪರೀಕ್ಷೆಗಳಿಗೆ ಇಲ್ಲಿನ ರೋಗಿಗಳು ಹಾಸನಕ್ಕೆ ತೆರಳಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದರು.

ಅಲ್ಲದೆ, ಕೆಲವು ಲ್ಯಾಬ್ ವರದಿಗಳನ್ನು ಪಡೆಯಲು ಮೂರರಿಂದ ನಾಲ್ಕು ದಿನಗಳ ವರೆಗೆ ಕಾಯಬೇಕಾಗುತ್ತಿದ್ದ ಸಮಸ್ಯೆ ಇತ್ತು ಎಂದು ತಿಳಿಸಿದರು.

ಈಗ ಆಸ್ಪತ್ರೆ ಆವರಣದಲ್ಲೇ ಆಧುನಿಕ ಸೌಲಭ್ಯಗಳೊಂದಿಗೆ ಹೊಸ ಲ್ಯಾಬ್ ನಿರ್ಮಾಣವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತಕ್ಷಣ ಪರೀಕ್ಷಾ ಸೇವೆಗಳು ಲಭ್ಯವಾಗಲಿವೆ. ಸಮಯಕ್ಕೆ ಸರಿಯಾಗಿ ವರದಿಗಳು ದೊರೆಯುವುದರಿಂದ ಚಿಕಿತ್ಸೆ ಪ್ರಕ್ರಿಯೆಗೂ ವೇಗ ಬರಲಿದ್ದು, ವಿಶೇಷವಾಗಿ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ನೂತನ ಲ್ಯಾಬ್‌ನಲ್ಲಿ ಆಧುನಿಕ ವೈದ್ಯಕೀಯ ಪರೀಕ್ಷಾ ಸಾಧನಗಳನ್ನು ಅಳವಡಿಸಲಾಗುತ್ತಿದ್ದು, ವಿವಿಧ ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ ಸೇರಿ ಅನೇಕ ಅಗತ್ಯ ತಪಾಸಣೆಗಳನ್ನು ಸ್ಥಳೀಯ ಮಟ್ಟದಲ್ಲೇ ನಡೆಸಲು ಸಾಧ್ಯವಾಗಲಿದೆ. ಅದರಿಂದ ರೋಗಿಗಳ ಸಮಯ ಮತ್ತು ಹಣ ಎರಡೂ ಉಳಿತಾಯವಾಗಲಿವೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಕ್ರಾಫರ್ಡ್ ಆಸ್ಪತ್ರೆಗೆ ಇನ್ನೂ ಹೆಚ್ಚಿನ ಮೂಲಸೌಲಭ್ಯಗಳ ಅಗತ್ಯವಿದ್ದು, ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಬೇಕಾದ ಇನ್ನಷ್ಟು ಸೌಲಭ್ಯಗಳನ್ನು ಒದಗಿಸಿ ಮಾದರಿ ಆಸ್ಪತ್ರೆಯನ್ನಾಗಿ ರೂಪಿಸುವ ದಿಟ್ಟ ಸಂಕಲ್ಪ ಹೊಂದಿದ್ದೇವೆ ಎಂದು ಹೇಳಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ಮಹೇಶ್, ಕ್ರಾಫರ್ಡ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್, ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವಥ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸೋಮಶೇಖರ್, ಬಿಜೆಪಿ ನಗರ ಅಧ್ಯಕ್ಷ ದಿಂಬು ಲೋಕೇಶ್, ಪುರಸಭಾ ಮಾಜಿ ಸದಸ್ಯ ಪ್ರದೀಪ್, ಕೆಎಸ್‌ಆರ್‌ಟಿಸಿ ಪುಟ್ಟಣ್ಣ, ಗುರು ಪ್ರಶಾಂತ್, ವಿನಯ್, ಆರೋಗ್ಯ ಇಲಾಖೆಯ ಅಧಿಕಾರಿಗಳು, ಅರ್ಚಕ ಶ್ರೀಕಾಂತ್ ಇತರರು ಹಾಜರಿದ್ದರು.



## ಡ್ರಗ್ಸ್ ಮುಕ್ತ ಸಕಲೇಶಪುರಕ್ಕಾಗಿ ಏ.19ಕ್ಕೆ ವಿವಿಧ ಕಾರ್ಯಕ್ರಮ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಯುವ ಸಮಾಜವನ್ನು ಬಲಿ ತೆಗೆದುಕೊಳ್ಳುತ್ತಿರುವ ಮಾದಕ ದ್ರವ್ಯಗಳ ವಿರುದ್ಧ ಜಾಗೃತಿ ಮೂಡಿಸಲು ಹಾಗೂ ಸಮಾಜದ ವಿವಿಧ ಸ್ತರದ ಜನರನ್ನು ಒಂದೇ ವೇದಿಕೆಗೆ ತರುವ ಉದ್ದೇಶದಿಂದ ಡ್ರಗ್ಸ್ ಮುಕ್ತ ಸಕಲೇಶಪುರ ಆಂದೋಲನದ ವತಿಯಿಂದ ಏ. 19ರ ಸಂಜೆ 6.30ಕ್ಕೆ ಪಟ್ಟಣದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಆವರಣದಲ್ಲಿ ಸನ್ಮಾನ, ಪುಸ್ತಕ ಬಿಡುಗಡೆ ಮತ್ತು ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಆಂದೋಲನದ ಸಂಚಾಲಕ ಮಲ್ನಾಡ್ ಮೆಹಬೂಬ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಮಾರಂಭದಲ್ಲಿ ರಾಜ್ಯ ಅಂಬೇಡ್ಕರ್ ಪ್ರಶಸ್ತಿಗೆ ಭಾಜನರಾದ ದಲಿತ ಮುಖಂಡ ಹೆತ್ತೂರು ಅಣ್ಣಯ್ಯ ಅವರಿಗೆ ಗೌರವಿಸಲಾಗುವುದು. ಲೇಖಕಿ ಡಯಾನಾ ಡಿಸೋಜ ಅವರ ಚೊಚ್ಚಲ ಕೃತಿ ಅಂತರಂಗದ ಗುಟ್ಟು ಹಾಗೂ ಸಾಹಿತಿ ವಿಶ್ವಾಸ್ ಗೌಡ ಅವರ ದೇವರನ್ನು ಹುಡುಕಬೇಕಾಗಿದೆ ಎಂಬ ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಗುವುದು ಎಂದರು.

ಹೋರಾಟಗಾರ ನಾರಾಯಣ ಆಳ್ವ ಮಾತನಾಡಿ, ಡ್ರಗ್ಸ್ ಮಹಾಮಾರಿಯು ಯುವ ಪೀಳಿಗೆಯ ಭವಿಷ್ಯವನ್ನು ಕಮರಿಸುತ್ತಿದ್ದು, ಅದನ್ನು ತಡೆಯಲು ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಮೂಲಕ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ. ಈ ಕಾರ್ಯಕ್ರಮವು ಕೇವಲ ಆಚರಣೆಯಾಗದೆ ಸಾಮಾಜಿಕ ಚಳವಳಿಯಾಗಿ ರೂಪಗೊಳ್ಳಲಿದೆ ಎಂದು ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಕಾರ್ಯದರ್ಶಿ ಯೋಗೇಶ್ ಮಾತನಾಡಿ, ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಉದ್ಘಾಟನೆ ನೆರವೇರಿಸಲಿದ್ದು, ಹಿರಿಯ ರಂಗಕರ್ಮಿ ಪ್ರಸಾದ್ ರಕ್ಷಿದಿ ಪುಸ್ತಕಗಳ ಕುರಿತು ಮಾತನಾಡಲಿದ್ದಾರೆ. ತಹಶೀಲ್ದಾರ್ ಸುಪ್ರೀತಾ, ಡಿವೈಎಸ್‌ಪಿ ಮಾಲತೇಶ್ ಹಾಗು ವಿವಿಧ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದರು.

ನಾಗರಿಕರ ಸಂರಕ್ಷಣಾ ಸಮಿತಿ ಅಧ್ಯಕ್ಷ ರವಿ ಕುಮಾರ್ ಮಾತನಾಡಿದರು. ಲೇಖಕಿ ದಯಾನ ಡಿಸೋಜ, ದಯಾನಂದ ಹಾಗೂ ಮಂಜು ಹಾಜರಿದ್ದರು.

## ದುಡ್ಡು ಹಿಂದಿರುಗಿಸಿ ಮಾನವೀಯತೆ ಮೆರೆದ ಸಿಬ್ಬಂದಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಬಸ್‌ನಲ್ಲೇ ಬಿಟ್ಟು ಹೋಗಿದ್ದ 67.05 ಸಾವಿರ ರೂ. ಹಾಗೂ 1.10 ಲಕ್ಷ ರೂ. ಮೌಲ್ಯದ ಚೆಕ್ ಅನ್ನು ಕೆಎಸ್‌ಆರ್‌ಟಿಸಿ ಬಸ್ ಚಾಲಕ ಮತ್ತು ನಿರ್ವಾಹಕ ವಾರಸುದಾರರಿಗೆ ಹಿಂದಿರುಗಿಸಿ ಮಾನವೀಯತೆ ಮೆರೆದಿದ್ದಾರೆ.

ಚನ್ನರಾಯಪಟ್ಟಣದಿಂದ ಹಾಸನಕ್ಕೆ ಪ್ರಯಾಣಿಸುತ್ತಿದ್ದ ಬಸ್ ತಾಂತ್ರಿಕ ಸಮಸ್ಯೆಯಿಂದ ಡಿಪೋಗೆ ತೆರಳಬೇಕಾಯಿತು. ಆಗ ಬಸ್‌ನಲ್ಲಿದ್ದ ಪ್ರಯಾಣಿಕರನ್ನು ಕೆಳಗಿಳಿಸಿ ಬೇರೆ ಬಸ್‌ಗೆ ಹತ್ತಿಸಿದ್ದ ಚಾಲಕ ಎನ್.ಸಿ.ಕೃಷ್ಣೇಗೌಡ ಹಾಗೂ ನಿರ್ವಾಹಕ ಜಗದೀಶ್ ಅವರು ಬಸ್ ದುರಸ್ತಿಗಾಗಿ ಡಿಪೋಗೆ ವಾಪಾಸ್ ಹೋದಾಗ ಬ್ಯಾಗ್ ಕಂಡಿದೆ.

ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಕಪಿಲ್ ಶರ್ಮಾ ಮತ್ತು ಬಾಲಕಿಶನ್ ಶರ್ಮಾ ಪ್ರಯಾಣಿಸುತ್ತಿದ್ದರು. ಅವರು ಬದಲಿ ಬಸ್ ಅನ್ನು ಏರುವಾಗ ಚನ್ನರಾಯಪಟ್ಟಣದ ವರ್ತಕರಿಂದ ಸಂಗ್ರಹಿಸಿದ್ದ 67.05 ಸಾವಿರ ರೂ. ಹಣ ಹಾಗೂ 1.10 ಲಕ್ಷ ರೂ. ಮೌಲ್ಯದ ಸಹಿ ಮಾಡಿದ ಚೆಕ್ ಇರುವ ಬ್ಯಾಗ್ ಬಿಟ್ಟು ಇಳಿದು ಹೋಗಿದ್ದರು.

ಬಸ್ ದುರಸ್ತಿಗಾಗಿ ಚನ್ನರಾಯಪಟ್ಟಣ ಘಟಕಕ್ಕೆ ವಾಪಾಸ್ ತಂದಾಗ ಬ್ಯಾಗ್ ಇರುವುದು ಗೊತ್ತಾಗಿದೆ. ಬ್ಯಾಗ್ ಪರಿಶೀಲಿಸಿದಾಗ ಸಹಿ ಮಾಡಿದ ಖಾಲಿ ಚೆಕ್ ಹಾಗು ಹಣವಿರುವುದನ್ನು ಗಮನಿಸಿದ ನಿರ್ವಾಹಕ ಮತ್ತು ಚಾಲಕರು ಕೂಡಲೇ ಘಟಕ ವ್ಯವಸ್ಥಾಪಕರಿಗೆ ವಿಷಯ ತಲುಪಿಸಿದ್ದಾರೆ. ಘಟಕ ವ್ಯವಸ್ಥಾಪಕರಾದ ಜ್ಞಾನೇಶ್ ಅವರು ಬ್ಯಾಗ್ ಪರಿಶೀಲಿಸಿ ಬ್ಯಾಗ್‌ನಲ್ಲಿ ದೊರೆತ ಆಧಾರ್ ಕಾರ್ಡ್‌ನಿಂದ ದೂರವಾಣಿ ಸಂಖ್ಯೆಯನ್ನು ಪತ್ತೆ ಹಚ್ಚಿ ಅವರನ್ನು ಸಂಪರ್ಕಿಸಿದ್ದಾರೆ. ಹಣದ ಬ್ಯಾಗ್ ಕಳೆದುಕೊಂಡು ಗಾಬರಿಯಲ್ಲಿದ್ದ ಕಪಿಲ್ ಶರ್ಮಾ ಮತ್ತು ಬಾಲಕಿಶನ್ ಶರ್ಮಾ ಓಡೋಡಿ ಬಂದು ಚನ್ನರಾಯಪಟ್ಟಣ ಘಟಕವನ್ನು ಸಂಪರ್ಕಿಸಿದ್ದಾರೆ.

ಘಟಕ ವ್ಯವಸ್ಥಾಪಕರು ಹಾಗೂ ಭದ್ರತಾ ಸಿಬ್ಬಂದಿ ಹಣದ ಬ್ಯಾಗ್ ಮಾಲೀಕ ಕಪಿಲ್ ಶರ್ಮಾ ಮತ್ತು ಬಾಲಕಿಶನ್ ಶರ್ಮಾ ವಿಳಾಸ ದಾಖಲೆಗಳನ್ನು ಖಚಿತಪಡಿಸಿಕೊಂಡು ಹಿಂತಿರುಗಿಸಿದ್ದಾರೆ. ಏತನ್ಮಧ್ಯೆ ಕಪಿಲ್ ಶರ್ಮಾ ಮತ್ತು ಬಾಲಕಿಶನ್ ಶರ್ಮಾ ಚನ್ನರಾಯಪಟ್ಟಣದ ಕಬ್ಬಿಣದ ಅಂಗಡಿಗಳಿಗೆ ಸಾಮಾಗ್ರಿ ಸರಬರಾಜು ಮಾಡುತ್ತಿದ್ದು ಅವರಿಂದ ಪಡೆದ 67.05 ಸಾವಿರ ರೂ. ಹಾಗು ಸಹಿ ಮಾಡಿದ 1.10 ಲಕ್ಷ ರೂ. ಮೌಲ್ಯದ ಚೆಕ್‌ಗಳನ್ನು ಹಾಸನಕ್ಕೆ ತೆಗೆದುಕೊಂಡು ಹೋಗುತ್ತಿದ್ದರು. ಮೇಲಾಧಿಕಾರಿಗಳ ನೆರವಿನಿಂದ ವಾರಸುದಾರರಿಗೆ ಹಣ ಹಾಗೂ ಚೆಕ್ ತಲುಪಿ ಪ್ರಕರಣ ಸುಖಾಂತ್ಯ ಕಂಡಿದೆ.

## ಸಂಭ್ರಮದಿಂದ ನೆರವೇರಿದ ಕೆರೆಕೋಡಮ್ಮನವರ ಜಾತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಹಿರಿಗರ್ಜೆ–ಕೊಪ್ಪಲು ಗ್ರಾಮದಲ್ಲಿ ಶ್ರೀ ಕ್ಷೇತ್ರ ಆದಿಶಕ್ತಿ ಕೆರೆಕೋಡಮ್ಮನವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನೆರವೇರಿತು.

ಮೂರು ದಿನ ಜರುಗುವ ಪೂಜೋತವಕ್ಕೆ ಚಾಲನೆ ನೀಡಲಾಯಿತು. ಗೋಧೂಳಿ ಲಗ್ನದಲ್ಲಿ ಗ್ರಾಮದೇವತೆ ಹಾಗೂ ಪರಿವಾರ ದೇವತೆಗಳಿಗೆ ಅಭಿಷೇಕ, ಗಂಗಾ ಪೂಜೆ, ಕೆರೆಕೋಡಮ್ಮನವರಿಗೆ ಮಹಾರುದ್ರಾಭಿಷೇಕ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನಡೆಯಿತು. ಎರಡನೇ ದಿನ ಅಮ್ಮನವರನ್ನು ಬನಕ್ಕೆ ಹೊರಡಿಸಿ ಶುಭ ಲಗ್ನದಲ್ಲಿ ಅಮ್ಮನವರಿಗೆ ಗಂಗಾಸ್ನಾನದಲ್ಲಿ ಪಂಚಾಮೃತ ಅಭಿಷೇಕ, ಮಹಾಂಗಳಾರತಿ ಮುಗಿದ ಬಳಿಕ ಹಗಲು ಉತ್ಸವ ಜರುಗಿತು. ಕೊನೆಯ ದಿನದಂದು ಹವಳಪ್ಪ ಸ್ವಾಮಿಯವರಿಗೆ ಹಾಗೂ ಚಿಕ್ಕಮ್ಮನವರಿಗೆ ಅಮ್ಮನವರ ಬನದಲ್ಲಿ ಕವಳ ಕಾರ್ಯಕ್ರಮ ಜರುಗಿತು.


ಶ್ರೀ ಆದಿಶಕ್ತಿ ಕೆರೆಕೋಡಮ್ಮನವರ ಸೇವಾ ಸಮಿತಿ ಅಧ್ಯಕ್ಷ ಹೆಚ್.ಪಿ.ಗೋಪಾಲ್, ಕಾರ್ಯದರ್ಶಿಗಳಾದ ಹೆಚ್.ಬಿ.ದಿನೇಶ್, ಆಟೋ ದಿನೇಶ್, ಚಂದ್ರಶೇಖರ್, ಖಜಾಂಚಿ ಮಂಜುನಾಥ್, ಅರ್ಚಕರಾದ ವೀರಭದ್ರ, ಚಂದ್ರಯ್ಯ, ಸಮಿತಿ ಕಾರ್ಯಕರ್ತರಾದ ಪ್ರೀತಮ್, ರುದ್ರೇಶ್, ಕಾರ್ತಿಕ್, ತುಂಗಭದ್ರ, ದ್ಯಾವಪ್ಪ, ಮಹೇಂದ್ರ, ನಿರಂಜನ್, ನಂದೀಶ್ ಹಾಗೂ ಇತರರಿದ್ದರು.

## ಕಾಡಾನೆ ಕಾರ್ಯಾಚರಣೆ ವಿಫಲ: ಮುಂದೂಡಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ತಾಲ್ಲೂಕು ಅರೇಹಳ್ಳಿ ಹೋಬಳಿಯ ಕಿತ್ತಾವರ ಬಿ ಬ್ಲಾಕ್‌ನಲ್ಲಿ ತಪ್ಪಿಸಿಕೊಂಡಿದ್ದ ಕಾಡಾನೆಯನ್ನು ಹಿಡಿಯುವ ಕಾರ್ಯಾಚರಣೆ ಶುಕ್ರವಾರ ಆರಂಭವಾಯಿತಾದರೂ ಕಾಡಾನೆ ಅರಣ್ಯ ಇಲಾಖೆ ಕಣ್ಣಿಗೆ ಬೀಳದೆ ಚಳ್ಳೆಹಣ್ಣು ತಿನ್ನಿಸಿದೆ.

ಬೇಲೂರು ರೇಂಜ್‌ನಿಂದ ಮೂಡಿಗೆರೆ ರೇಂಜ್‌ಗೆ ತೆರಳಿದ ಕಾಡಾನೆ ಅರಣ್ಯ ಇಲಾಖೆಯ ಸಿಬ್ಬಂದಿಗೆ ಹಾಗೂ ವೈದ್ಯ ಸಿಬ್ಬಂದಿಗೆ ಸಿಗದೆ ಸಂಜೆಯವರೆಗೂ ಸತಾಯಿಸಿ ಸಂಜೆಯಾಗುತ್ತಿದ್ದಂತೆ ಕಾನಳ್ಳಿ ಅರಣ್ಯ ಪ್ರದೇಶದತ್ತ ತೆರಳಿತು.



ಕತ್ತಲಾದ ಕಾರಣ ಕಾರ್ಯಾಚರಣೆಯನ್ನು ನಾಳೆಗೆ ಮುಂದೂಡಲಾಯಿತು.

ಈ ವೇಳೆ ಡಿಎಫ್‌ಒ ಸೌರಭ್ ಕುಮಾರ್ ಮಾತನಾಡಿ, ಕಾಡಾನೆಯು ಒಂದೆಡೆ ನಿಲ್ಲುತ್ತಿಲ್ಲ. ಕಾಡಾನೆಗೆ ಹೊಡೆದ ಒಂದು ಡಾಟ್ ತಪ್ಪಿತು. ಮತ್ತಿಗೋಡಿನಿಂದ ಸಾಕಾನೆಗಳು ಆಗಮಿಸಿದ್ದು ತಡವಾದ್ದರಿಂದ ಕಾರ್ಯಾಚರಣೆಯು ಸಹ ತಡವಾಯಿತು. ಶನಿವಾರ ಬೆಳಿಗ್ಗೆ ಕಾಡಾನೆ ಹಿಡಿಯುವ ಕಾರ್ಯಾಚರಣೆಗೆ ಚಾಲನೆ ನೀಡಲಾಗುವುದು ಎಂದರು.

## ವಿದ್ಯಾರ್ಥಿ ವೇತನಕ್ಕಾಗಿ ಎಬಿವಿಪಿ ಹೋರಾಟ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ರಾಜ್ಯ ಸರ್ಕಾರ ವಿದ್ಯಾರ್ಥಿ ವೇತನ ಪಾವತಿಸದೆ ವ್ಯಾಸಂಗಕ್ಕೆ ಕೊಡಲಿ ಪೆಟ್ಟು ನೀಡುತ್ತಿದೆ ಎಂದು ಆರೋಪಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಎಸ್‌ಎಸ್‌ಪಿ ತಂತ್ರಾಂಶದ ಮೂಲಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ, ಸಮಾಜ ಕಲ್ಯಾಣ, ಆಯುಷ್, ತಾಂತ್ರಿಕ ಶಿಕ್ಷಣ ಹಾಗೂ ವಿವಿಧ ಇಲಾಖೆಯಡಿ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸಿದ್ದಾರೆ. ಆದರೆ ರಾಜ್ಯ ಸರ್ಕಾರ ಸಮಯಕ್ಕೆ ಸರಿಯಾಗಿ ಹಣ ಬಿಡುಗಡೆ ಮಾಡದೆ ಭವಿಷ್ಯವನ್ನು ಸಂಕಷ್ಟಕ್ಕೆ ದೂಡುತ್ತಿದೆ ಎಂದು ಆರೋಪಿಸಿದರು.

ಹಣ ಪಾವತಿಯಾಗುವ ಮೊದಲೇ ಮುಂದಿನ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿರುವುದು ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿಸಿದೆ. ಕಳೆದ ಸಾಲಿನ ಮೆಟ್ರಿಕ್ ನಂತರದ (ಪೋಸ್ಟ್ ಮೆಟ್ರಿಕ್) ವಿದ್ಯಾರ್ಥಿ ವೇತನವು ಇನ್ನೂ ಅನೇಕ ವಿದ್ಯಾರ್ಥಿಗಳಿಗೆ ತಲುಪಿಲ್ಲ. ಕೂಡಲೇ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಬೇಕು. ವಿದ್ಯಾರ್ಥಿ ವೇತನಕ್ಕಾಗಿ ಮೀಸಲಿಟ್ಟ ಹಣವನ್ನು ಬೇರೆ ಯೋಜನೆಗಳಿಗೆ ಅಥವಾ ಗ್ಯಾರಂಟಿಗಳಿಗೆ ಬಳಸಿಕೊಳ್ಳುವುದನ್ನು ನಿಲ್ಲಿಸಿ ಕೇವಲ ಶೈಕ್ಷಣಿಕ ಉದ್ದೇಶಗಳಿಗಾಗಿಯೇ ಆ ಹಣವನ್ನು ಬಳಕೆ ಮಾಡಬೇಕು. ಹೊಸ ಅರ್ಜಿ ಸಲ್ಲಿಕೆಗೆ ಅವಕಾಶ ನೀಡುವ ಮುನ್ನ ಹಳೆಯ ಬಾಕಿ ಪಾವತಿಸಬೇಕು. ಎಸ್‌ಎಸ್‌ಪಿ ಪೋರ್ಟಲ್‌ಗೆ ಸಂಬಂಧಿಸಿದ ದೂರುಗಳನ್ನು ಕೇಳಲು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ಕೌಂಟರ್‌ಗಳನ್ನು ತೆರೆಯಬೇಕು ಮತ್ತು ಗೊಂದಲ ಬಗೆಹರಿಸಬೇಕೆಂದು ಆಗ್ರಹಿಸಿದರು.

ಎಬಿವಿಪಿ ದಕ್ಷಿಣ ವಿಭಾಗ ಕಾರ್ಯದರ್ಶಿ ಗೋಪಿ ರಂಗಸ್ವಾಮಿ, ವರುಣ್ ಪುರಾಣಿಕ್, ಭುವನ್, ಪ್ರಭಾತ್, ಮಮತಾ, ರವಿ ಇತರರಿದ್ದರು.

## ವ್ಯಾಯಾಮದ ಜೊತೆ ಆಹಾರ ಶೈಲಿಯೂ ನಿಯಬದ್ಧವಾಗಿರಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಮಾನಸಿಕ ಹಾಗೂ ದೈಹಿಕ ಸದೃಢತೆಗೆ ಯೋಗ ಮತ್ತು ಧ್ಯಾನ ಮಾತ್ರ ಸಾಕಾಗುವುದಿಲ್ಲ. ದೈನಂದಿನ ಜೀವನ ಶೈಲಿಯೂ ಸಮತೋಲನದಲ್ಲಿರಬೇಕು ಎಂದು ಯೋಗ ಗುರು ಚೇತನ ಗುರೂಜಿ ಹೇಳಿದರು.

ಪಟ್ಟಣದ ಲಯನ್ಸ್ ಸಭಾಂಗಣದಲ್ಲಿ ಲಯನ್ಸ್ ಸೇವಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಯೋಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಒತ್ತಡದ ಜೀವನದಿಂದ ಹೊರಬರಲು ಯೋಗ–ಧ್ಯಾನದ ಜೊತೆಗೆ ಸರಿಯಾದ ಆಹಾರ ಪದ್ಧತಿ, ಸಕಾರಾತ್ಮಕ ಆಲೋಚನೆ, ಪರಸ್ಪರ ಪ್ರೀತಿ–ವಿಶ್ವಾಸದೊಂದಿಗೆ ಬದುಕುವ ಮನೋಭಾವ ಅಗತ್ಯವಿದೆ ಎಂದು ಹೇಳಿದರು.

ಪ್ರತಿ ವ್ಯಕ್ತಿಯೂ ತಮ್ಮ ಜೀವನದಲ್ಲಿ ಸ್ಪಷ್ಟ ಗುರಿ ಮತ್ತು ಉದ್ದೇಶ ಹೊಂದಿರಬೇಕು. ಜೀವನದ ಪ್ರತಿಯೊಂದು ಕಾರ್ಯವೂ ಆತ್ಮತೃಪ್ತಿಯನ್ನು ನೀಡುವಂತಾಗಿದ್ದರೆ ಮಾತ್ರ ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮವಾಗಿರುತ್ತದೆ ಎಂದು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳಿಂದ ಜನರ ಆರೋಗ್ಯ ಹಾನಿಗೊಳಗಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಆಸ್ಪತ್ರೆಗಳು ಹಣ ಮಾಡುವ ಕೇಂದ್ರಗಳಾಗಿ ಪರಿಣಮಿಸುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ಆರೋಗ್ಯವನ್ನು ತಾವೇ ಕಾಪಾಡಿಕೊಳ್ಳುವ ಜಾಗೃತಿ ಹೊಂದಬೇಕೆಂದು ಸಲಹೆ ನೀಡಿದರು.

ಮುಂದುವರೆದ ದೇಶಗಳಲ್ಲಿ ಫಾಸ್ಟ್ ಫುಡ್ ಬಳಕೆ ಕಡಿಮೆಯಾಗುತ್ತಿದ್ದು, ಯೋಗ–ಧ್ಯಾನ ಸೇರಿ ವೆಲ್‌ನೆಸ್ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಆದರೆ ಭಾರತದಲ್ಲಿ ರಕ್ತದೊತ್ತಡ, ಮಧುಮೇಹ ಮುಂತಾದ ರೋಗಗಳಿಗೆ ಔಷಧಿಗಳ ಅವಲಂಬನೆ ಹೆಚ್ಚುತ್ತಿರುವುದು ಚಿಂತಾಜನಕ ವಿಷಯವಾಗಿದೆ ಎಂದು ಹೇಳಿದರು.

ಲಯನ್ಸ್ ಸಂಸ್ಥೆ ವತಿಯಿಂದ 12 ದಿನಗಳ ಕಾಲ ಉಚಿತವಾಗಿ ಆಯೋಜಿಸಿದ್ದ ಯೋಗ ಶಿಬಿರದಲ್ಲಿ ಅನೇಕರು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

ಲಯನ್ಸ್ ಸಂಸ್ಥೆ ತಾಲ್ಲೂಕು ಅಧ್ಯಕ್ಷ ಮಂಜುನಾಥ್, ಜನಜಾಗೃತಿ ವೇದಿಕೆ ಅಧ್ಯಕ್ಷ ಡಾ. ನವೀನ್ ಚಂದ್ರ ಶೆಟ್ಟಿ, ಲಯನ್ಸ್ ತಾಲ್ಲೂಕು ಕಾರ್ಯದರ್ಶಿ ಬಸವರಾಜು, ಯೋಗ ಚೇತನ ಟ್ರಸ್ಟ್ ಅಧ್ಯಕ್ಷ ಲಕ್ಷ್ಮೀ ರಂಗನಾಥ್, ಲಕ್ಷ್ಮಣ ಕೀರ್ತಿ, ಜಗದೀಶ್, ಗೀತಾ ಹಾಗೂ ಇತರರಿದ್ದರು.

# 3.50 ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಪಟ್ಟಣದಲ್ಲಿ ನೆನಗುದಿಗೆ ಬಿದ್ದಿದ್ದ ಹೈಟೆಕ್ ಅಂಬೇಡ್ಕರ್ ಭವನದ ಮುಂದುವರಿದ ಕಾಮಗಾರಿಯನ್ನು 3.50 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದ್ದು, ಇಡೀ ಜಿಲ್ಲೆಯಲ್ಲಿಯೇ ಸರ್ವಜನರನ್ನು ಕೈಬೀಸಿ ಕರೆಯುವ ಭವನ ಇದಾಗಲಿದೆ ಎಂದು ಶಾಸಕ ಎ.ಮಂಜು ತಿಳಿಸಿದರು.

ಮುಂದುವರಿದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಕಳೆದ 8 ವರ್ಷಗಳ ಹಿಂದೆ ಪಟ್ಟಣದ ಹೃದಯ ಭಾಗದಲ್ಲಿನ ಹಳೆಯ ಭವನವನ್ನು ನೆಲಸಮಗೊಳಿಸಿ 1.50 ಕೋಟಿ ರೂ. ವೆಚ್ಚದಲ್ಲಿ ನಾನು ಶಾಸಕ ಸಚಿವನಾಗಿದ್ದ ವೇಳೆ ಶಂಕುಸ್ಥಾಪನೆ ನೆರವೇರಿಸಿದ್ದೆ. ನಂತರದ ಚುನಾವಣೆಯಲ್ಲಿ ನಾನು ಸೋಲನ್ನು ಕಾಣಬೇಕಾಯಿತು. ಹಿಂದಿನ ಅವಧಿಯಲ್ಲಿ ಶಾಸಕರಾಗಿದ್ದವರು ಭವನದ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಿಲ್ಲ. ಅದೇ ರೀತಿ ನನ್ನ ಅವಧಿಯಲ್ಲಿಯೇ ತಾಲೂಕು ಕಚೇರಿ ಆವರಣದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ ಮಾಡಿದ್ದೆ. ಅಲ್ಲಿಯೂ ಕೂಡ ಗೋಪುರ ನಿರ್ಮಿಸುವ ಕೆಲಸ ಆಗಿರಲಿಲ್ಲ. ಹಾಗಾಗಿ ಈ ಎರಡು ಕಾಮಗಾರಿ ನೆನಗುದಿಗೆ ಬೀಳಲು ಕಾರಣವಾಯಿತು. ಪುನಃ ನಾನೇ ಶಾಸಕನಾದ ಮೇಲೆ ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದ ಪರಿಣಾಮ ಹಣ ಬಿಡುಗಡೆಯಾಗಿದೆ. ನಾನೇ ಆರಂಭಿಸಿದ ಕೆಲಸ ನನ್ನ ಅವಧಿಯಲ್ಲಿ ಪೂರ್ಣಗೊಳಿಸುವ ಅವಕಾಶ ದೊರೆತಿದೆ ಎಂದು ಹೇಳಿದರು.

ಕಳೆದ ಆರು ತಿಂಗಳ ಅವಧಿಯಲ್ಲಿ ನೆನಗುದಿಗೆ ಬಿದ್ದಿದ್ದ ಅಂಬೇಡ್ಕರ್ ಗೋಪುರ ಕಾಮಗಾರಿಯನ್ನು ಮೈಸೂರು ಅರಸರ ಗೋಪುರ ಮಾದರಿಯಲ್ಲಿ ನಿರ್ಮಿಸಿ ಅಂಬೇಡ್ಕರ್ ಜಯಂತಿಯಂದು ಲೋಕಾರ್ಪಣೆಗೊಳಿದ್ದೇನೆ. ಅದೇ ರೀತಿ ಅಂಬೇಡ್ಕರ್ ಭವನ ಕಾಮಗಾರಿಯನ್ನು ಸಹ ಆರು ತಿಂಗಳ ಒಳಗೆ ಆಧುನಿಕ ಶೈಲಿಯಲ್ಲಿ ಕೆಲಸ ಮುಗಿಸಿ ಸರ್ವಪಕ್ಷಗಳ ಮುಖಂಡರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿ ಸಹಸ್ರಾರು ಸಂಖ್ಯೆಯ ಅಂಬೇಡ್ಕರ್ ಅಭಿಮಾನಿಗಳ ಸಮ್ಮುಖದಲ್ಲಿ ಭವನವನ್ನು ಉದ್ಘಾಟಿಸುವ ಮಹಾದಾಸೆ ಹೊಂದಲಾಗಿದೆ ಎಂದರು.

ಒಟ್ಟು 3.50 ಕೋಟಿ ರೂ. ವೆಚ್ಚದಲ್ಲಿ ಬಾಕಿ ಉಳಿದಿರುವ ಅಂಬೇಡ್ಕರ್ ಭವನ ಕಾಮಗಾರಿ ನಡೆಯಲಿದೆ. ಈಗಾಗಲೇ ಸರ್ಕಾರ 1.50 ಕೋಟಿ ರೂ. ಬಿಡುಗಡೆಮಾಡಿದ್ದು, ಹೆಚ್ಚುವರಿಯಾಗಿ 2 ಕೋಟಿ ರೂ. ನೀಡುವ ಭರವಸೆಯನ್ನು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹಾದೇವಪ್ಪ ಅವರು ನೀಡಿದ್ದಾರೆ.ಇದಲ್ಲದೇ ನಾನು ವಯಕ್ತಿಕವಾಗಿಯೂ ಹಣ ವಿನಿಯೋಗಿಸುವ ಒತ್ತಾಸೆಯನ್ನು ಹೊಂದಿದ್ದೇನೆ. ಅಂಬೇಡ್ಕರ್ ಆಶಯದಂತೆ ನೂತನ ಭವನ ಎಲ್ಲಾ ಸಮಾಜದವರ ಕಲ್ಯಾಣ ಕಾರ್ಯಗಳಿಗೆ ಆಸರೆಯಾಗಲಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರಾಜಕೀಯ ಪ್ರೇರಿತವಾಗಿ ನನ್ನ ದಲಿತಪರ ಕಾರ್ಯಗಳನ್ನು ಸಹಿಸದೇ ಕೆಲವರು ಟೀಕೆಗಳನ್ನು ಮಾಡುತ್ತಾರೆ. ಅದಕ್ಕೆ ನಾನು ಕಿವಿಗೊಡೊದಿಲ್ಲ. ನಾನು ಬೆಳೆದು ಬಂದಿರುವ ರೀತಿ, ನನ್ನ ಒಡನಾಟ ಹಾಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಡೆಯಲು ಹೆಜ್ಜೆ ಇಟ್ಟಿದ್ದೇನೆ.ಇಡೀ ರಾಜ್ಯದಲ್ಲಿ 224ಮಂದಿ ಶಾಸಕರು, ವಿಧಾನ ಪರಿಷತ್ ಸದಸ್ಯರು ಇದ್ದಾರೆ. ಇದರಲ್ಲಿ ದಲಿತ ಸಮುದಾಯ, ಹಿಂದುಳಿದ ವರ್ಗಗಳಿಗೆ ಸೇರಿರುವವರು ಇದ್ದಾರೆ. ದಲಿತರ ಮನೆಯಲ್ಲಿ ವಾಸ್ತವ್ಯ ಹೂಡುವುದನ್ನು ಕಂಡಿಲ್ಲ. ನಾನು ಕಳೆದ ಐದು ವರ್ಷಗಳಿಂದಲೂ ಈ ಮಹಾನ್ ಕಾರ್ಯವನ್ನು ಕೈಗೊಂಡು ಸಮಾಜ ಪರಿವರ್ತನೆಗೆ ಅರಿವು ಮೂಡಿಸುತ್ತಿದ್ದೇನೆ. ಈ ಕೆಲಸ ನಾನು ಸೋತಾಗಲು ಕೂಡ ಕೈಗೊಂಡಿದ್ದೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖಂಡರಾದ ಹೊನ್ನವಳ್ಳಿ ಸತೀಶ್, ಕೃಷ್ಣಯ್ಯ, ರಶ್ಮಿ ಮಂಜುನಾಥ್, ಡಿ.ರಾಮು, ಜೈಭೀಮ್ ನಗರ ಮಂಜು, ಅನಿಕೇತನ್, ಮಂಜು ಶೆಟ್ಟಿಗೌಡ, ಅಧಿಕಾರಿಗಳಾದ ರವಿಕುಮಾರ್, ಡಾ.ಪುಷ್ಪಲತಾ, ಧನಲಕ್ಷ್ಮೀ ಇತರರು ಇದ್ದರು.

# ಹಠಾತ್ತನೇ ಮೂರ್ಛೆ ಬಿದ್ದ ಟ್ರ್ಯಾಕ್ಟರ್ ಚಾಲಕ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದಿಂದ ರಾಮನಾಥಪುರ ಕಡೆಗೆ ಟ್ರ್ಯಾಕ್ಟರ್ ಚಾಲನೆ ಮಾಡುತ್ತಿದ್ದ ವ್ಯಕ್ತಿಯೋರ್ವ ಹಠಾತ್ತನೆ ಮೂರ್ಛೆ ಹೋದ ಪ್ರಕರಣ ನಡೆದಿದೆ.

ಮಧ್ಯಾಹ್ನ 12.15ರ ವೇಳೆ ಪಟ್ಟಣದ ಖಾಸಗಿ ಅಂಗಡಿಯೊಂದರಲ್ಲಿ ಪಶು ಆಹಾರದ ಚೀಲಗಳನ್ನು ಟ್ರ್ಯಾಕ್ಟರ್‌ನಲ್ಲಿ ತುಂಬಿಸಿಕೊಂಡು ಶಿರಂಗಾಲ ಗ್ರಾಮಕ್ಕೆ ತೆರಳುವ ಮಾರ್ಗ ಮಧ್ಯದಲ್ಲಿಯೇ ಚಾಲನೆ ಮಾಡುವ ವೇಳೆಯೇ ಮೂರ್ಛೆ ಹೋಗಿದ್ದಾನೆ. ಈ ವೇಳೆ ವಾಹನದ ಚಾಲನೆ ಮುಂದೆ ಸಾಗುತ್ತಿತ್ತು. ಪಟ್ಟಣದ ಚನ್ನಬಸವೇಶ್ವರ ಸಮುದಾಯದ ಸರ್ಕಲ್‌ನಲ್ಲಿ ಗಾಡಿಯನ್ನು ರಾಮನಾಥಪುರ ಮಾರ್ಗಕ್ಕೆ ತಿರುಗಿಸಿದ್ದಾನೆ. ಈ ಭಾಗ ಸ್ವಲ್ಪಮಟ್ಟಿಗೆ ದಿಬ್ಬದಿಂದ ಕೂಡಿರುವ ಪರಿಣಾಮ ನಿಧಾನವಾಗಿ ಟ್ರ್ಯಾಕ್ಟರ್ ಚಲಿಸುತ್ತಿದೆ. ಆದರೆ ಚಾಲಕ ಮಾತ್ರ ಸೀಟ್‌ಗೆ ಒರಗಿಕೊಂಡು ಪ್ರಜ್ಞಾ ಹೀನ ಸ್ಥಿತಿಯಲ್ಲಿ ತಲೆ ಹೊರಭಾಗಕ್ಕೆ ಬಾಗಿರುವುದು ಕಂಡುಬಂದೆ. ಕೂಡಲೇ ರಸ್ತೆಯಲ್ಲಿ ಸಂಚರಿಸುತ್ತಿದ್ದ ವಾಹನ ಸವಾರರು ನಿಧಾನಗತಿಯಲ್ಲಿ ಚಲಿಸುತ್ತಿದ್ದ ಟ್ರ್ಯಾಕ್ಟರ್‌ನ್ನು ತಡೆದು ಮುಂದೆ ಸಂಭವಿಸಬಹುದಾಗಿದ್ದ ಅಪಘಾತ, ಪ್ರಾಣ ಹಾನಿಯನ್ನು ತಪ್ಪಿಸಿದ್ದಾರೆ.

ಗಾಡಿಯನ್ನು ತಡೆದು ನಿದ್ರಾಹೀನ ಸ್ಥಿತಿಯಲ್ಲಿದ್ದ ಚಾಲಕನನ್ನು ಎಬ್ಬಿಸಲು ಮುಂದಾದ ವೇಳೆ ಪಿಡುಸು ಬಂದವನಂತೆ ನಡೆದುಕೊಂಡಿದ್ದಾನೆ. ಆದರೂ ಕೂಡ ಜನರು ಕಬ್ಬಿಣದ ಕೀ ಇತರೆ ವಸ್ತುಗಳನ್ನು ಕೈಗೆ ಇಟ್ಟು ಎಚ್ಚರಗೊಳಿಸುವ ಕೆಲಸವನ್ನು ಮಾಡಿದ್ದಾರೆ.

ಟ್ರ್ಯಾಕ್ಟರ್‌ನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಿ ಮುಂದೆ ನೀರು ಚಾಲನೆ ಮಾಡುವುದು ಬೇಡ ನಿಮ್ಮವರಿಗೆ ಮಾಹಿತಿ ನೀಡಿ ಕರೆದುಕೊಂಡು ಹೋಗುವಂತೆ ಜನರು ತಿಳಿಹೇಳಿದ ಮೇರೆಗೆ ಚಾಲಕನ ಕಡೆಯವರು ಬಂದು ವಾಹನವನ್ನು ತೆಗೆದುಕೊಂಡು ಹೋಗಿದ್ದಾರೆ.

ಟ್ರ್ಯಾಕ್ಟರ್ ಸ್ಟೇರಿಂಗ್ ಕೂಡ ಕಬ್ಬಿಣದು,ಎಲ್ಲಾ ಭಾಗಗಳು ಕೂಡ ಕಬ್ಬಿಣದಿಂದ ಕೂಡಿರುತ್ತವೆ. ಹೀಗಿದ್ದರೂ ಕೂಡ ಮೂರ್ಛೆಗೆ ಹೋಗುವುದು ಹೇಗೆ ಸಾಧ್ಯ ಎಂಬ ಅನುಮಾನವನ್ನು ಜನರು ವ್ಯಕ್ತಪಡಿಸಿದರು. ಇನ್ನು ಕೆಲವರು ಬಿಸಿಲಿನ ತಾಪಮಾನ ಅಧಿಕಗೊಂಡಿರುವ ಹಿನ್ನೆಲೆ ಈ ರೀತಿ ಆಗಿರಬಹುದು. ಚಾಲಕನೊಂದಿಗೆ ಬೇರೆ ಯಾರು ಬಂದಿಲ್ಲ. ಅಲ್ಲದೆ ಪಟ್ಟಣದಿಂದ ಚೀಲ ತುಂಬಿಕೊಂಡು ಹೊರಟ ವೇಳೆ ಹೀಗೆ ಆಗಿದೆ. ವಾಹನ ದಟ್ಟಣೆ ಅಥವಾ ಇಳಿಜಾರು ರಸ್ತೆಯಲ್ಲಿ ಈ ರೀತಿ ಆಗಿದ್ದರೇ ಅಪಘಾತ ಪ್ರಕರಣವನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

# ಏ. 30ರ ಒಳಗೆ ತೆರಿಗೆ ಪಾವತಿಸಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಪಟ್ಟಣ ಪಂಚಾಯಿತಿ ವ್ಯಾಪ್ತಿಗೊಳಪಡುವವರು 2026-27ನೇ ಸಾಲಿನ ತಮ್ಮ ಆಸ್ತಿ ತೆರಿಗೆಯನ್ನು ಏ. 30 ರೊಳಗೆ ಪಾವತಿ ಮಾಡಿದರೆ ಶೇ. 5 ರಷ್ಟು ವಿನಾಯಿತಿ ದೊರಕಲಿದೆ ಎಂದು ಪಟ್ಟಣ ಪಂಚಾಯಿತಿ ಆಡಳಿತಾಧಿಕಾರಿ ಮಲ್ಲಿಕಾರ್ಜುನ ಮತ್ತು ಮುಖ್ಯಾಧಿಕಾರಿ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 1 ರಿಂದ ಜೂ. 30ರ ಒಳಗೆ ಪಾವತಿಸುವವರಿಗೆ ದಂಡ ಪಾವತಿಯಲ್ಲಿ ವಿನಾಯಿತಿ ಇರುತ್ತದೆ. ಜು. 1ರ ನಂತರ ಪಾವತಿಸುವವರಿಗೆ ಆಸ್ತಿ ತೆರಿಗೆ ಮೊತ್ತದ ಮೇಲೆ ಪ್ರತಿ ತಿಂಗಳು ಶೇ. 2 ರಷ್ಟು ದಂಡ ವಿಧಿಸಲಾಗುತ್ತದೆ. ಸಾರ್ವಜನಿಕರು/ಉದ್ದಿಮೆದಾರರು ಪ್ರತಿನಿತ್ಯ ತಮ್ಮ ಮನೆ ಅಂಗಡಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಹಸಿ ಮತ್ತು ಒಣ ಕಸವನ್ನಾಗಿ ವಿಂಗಡಿಸಿ ತ್ಯಾಜ್ಯ ವಿಲೇವಾರಿ ವಾಹನಕ್ಕೆ ನೀಡಬೇಕು.

ಉದ್ದಿಮೆದಾರರು ಪರವಾನಗಿ/ಉದ್ದಿಮೆ ನವೀಕರಣ ಮಾಡಿಕೊಳ್ಳಬೇಕು. ಅಂಗಡಿ ಮುಂಭಾಗ ಅಳವಡಿಸುವ ನಾಮಫಲಕ ಶೇ. 60 ಭಾಗ ಕನ್ನಡ ಭಾಷೆಯಿಂದ ಕೂಡಿರಬೇಕು. ನಾಮಫಲಕದಲ್ಲಿ ಮಕ್ಕಳ ಸಹಾಯವಾಣಿ ನಂ. 1098 ಬರೆಸಿರಬೇಕು.

ಪ್ರಸ್ತುತ ಬೇಸಿಗೆ ಕಾಲವಾಗಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿರುವುದರಿಂದ, ಸಾರ್ವಜನಿಕರು ಕುಡಿಯಲು ಕುದಿಸಿ ಆರಿಸಿದ ನೀರನ್ನು ಬಳಸಬೇಕು. ಪ್ರತಿ ಹೋಟೆಲ್ಲುಗಳಲ್ಲಿ ಆಸಕ್ತರಿಗೆ ಬಿಸಿ ನೀರು ಕೊಡಬೇಕು.

ಪ. ಪಂ. ವತಿಯಿಂದ ವಾಣಿಜ್ಯ ಮಳಿಗೆಗಳನ್ನು ಬಾಡಿಗೆಗೆ ಪಡೆದಿರುವವರು ನಿಗಧಿತ ಸಮಯದಲ್ಲಿ ಬಾಡಿಗೆಯನ್ನು ಪಾವತಿಸಿದ್ದರೆ ಮಳಿಗೆಗಳಿಗೆ ಬೀಗ ಹಾಕಿ, ಪಾವತಿಸಿರುವ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ಮಳಿಗೆಗಳನ್ನು ಪ. ಪಂ. ವಶಕ್ಕೆ ಪಡೆದು, ಮರು ಹರಾಜು ಮಾಡಿ ಬಾಕಿ ವಸೂಲಿಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. ಹಸಿರು ಹಾಸನ-2026 ಅಂಗವಾಗಿ ಮನೆ ಮುಂದೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಿಡಗಳನ್ನು ಪೋಷಿಸಿ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

# ಅರಸೀಕೆರೆಯಲ್ಲಿ ಅದ್ದೂರಿ ಬಸವ ಜಯಂತಿಗೆ ಸಿದ್ಧತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಜಗಜ್ಯೋತಿ ಬಸವೇಶ್ವರರ 892ನೇ ಜಯಂತ್ಯೋತ್ಸವವನ್ನು ಏ. 20ರಂದು ನಗರದಲ್ಲಿ ಅರ್ಥಪೂರ್ಣದೊಂದಿಗೆ ಅದ್ದೂರಿಯಾಗಿ ಆಚರಿಸಲು ಬಸವ ಜಯಂತಿ ಉತ್ಸವ ಸಮಿತಿ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಸಮಿತಿ ಮುಖಂಡ ವಕೀಲ ಶಿವರಾಜ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನ್ ದಾರ್ಶನಿಕ ಅನುಭವ ಮಂಟಪದ ರೂವಾರಿ ಸಮಾಜದ ಶ್ರೇಷ್ಟತೆಗೆ ಶ್ರಮಿಸಿದ ವಚನಕಾರ ಬಸವಣ್ಣನವರು ಯಾವುದೇ ಒಂದು ಜಾತಿ ಮತ ಧರ್ಮಕ್ಕೆ ಸೀಮಿತರಾದವರಲ್ಲ. ಜಾತಿ ಮತ ಪಕ್ಷಬೇಧ ಎಂಬುದಿಲ್ಲದೆ ಬಸವ ಅನುಯಾಯಿಗಳೆಲ್ಲ ಸೇರಿ ಬಸವ ಜಯಂತಿ ಆಚರಣೆ ಮಾಡುತ್ತಿರುವುದಾಗಿ ತಿಳಿಸಿದರು.




ನಗರದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ಇನ್ನೂ ನೂರಾರು ಟಿಎಚ್ ರಸ್ತೆ ಸೇರಿ ನಗರದ ಪ್ರಮುಖ ರಸ್ತೆಗಳಲ್ಲಿ ಬಸವಣ್ಣನವರ ಭಾವಚಿತ್ರದ ಉತ್ಸವ ಸಾಗುವುದರಿಂದ ಈಗಾಗಲೇ ನಗರದ ರಸ್ತೆಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗುತ್ತಿದೆ. ಅದೇ ರೀತಿ ಉತ್ಸವದಲ್ಲಿ ನಂದಿ ಧ್ವಜ ವೀರಗಾಸೆ ಲಿಂಗ ವೀರರು ಡೊಳ್ಳು ಕುಣಿತ ಮಹಿಳಾ ವಿರಗಾಸೆ ಹೀಗೆ ನಾನಾ ಜಾನಪದ ಕಲಾತಂಡಗಳ ಕಲಾವಿದರು ತಮ್ಮ ಕಲಾ ಪ್ರದರ್ಶನವನ್ನು ನೀಡಲಿದ್ದಾರೆ ಎಂದು ವಿವರಿಸಿದ್ದರು.

ಸೋಮವಾರ ಮುಂಜಾನೆ ನಗರದ ಶಾನುಭೋಗರ ಬೀದಿಯಲ್ಲಿರುವ ಬಸವಣ್ಣನ ಮೂಲ ವಿಗ್ರಹಕ್ಕೆ ರುದ್ರಾಭಿಷೇಕ ಸೇರಿ ನಾನಾ ಅಭಿಷೇಕಗಳು ವಿವಿಧ ಅರ್ಚನೆಗಳ ಬಳಿಕ ಮಹಾಮಂಗಳಾರತಿ ನಡೆಯಲಿದೆ. ನಂತರ ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಪಾನಕ ಮತ್ತು ಫಲಹಾರ ವಿತರಣೆ ನಡೆಯಲಿದೆ ಎಂದರು.

ಸಂಜೆ ಜಗಜ್ಯೋತಿ ಬಸವೇಶ್ವರರ ಭಾವಚಿತ್ರವನ್ನು ಶೃಂಗರಿಸಿದ ಮಂಟಪದಲ್ಲಿ ಪ್ರತಿಷ್ಠಾಪಿಸಿ ನಂತರ ಉತ್ಸವ ಆರಂಭಗೊಳ್ಳಲಿದೆ ಉತ್ಸವದಲ್ಲಿ ಬಸವ ತತ್ವ ಅನುಯಾಯಿಗಳು ಸೇರಿ ಸಾರ್ವಜನಿಕರು ರಾಜಕೀಯ ಪಕ್ಷಗಳ ಮುಖಂಡರು ಜನಪರ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

# ಸಾಹಿತ್ಯ ವೇದಿಕೆಯಿಂದ ಹೊಸ ಪ್ರತಿಭೆಗಳ ಹುಡುಕಾಟ ನಿರಂತರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ರಾಫ್ಟ್ ಮಕ್ಕಳಲ್ಲಿ ಚಿಂತನಾ ಹಾಗೂ ಸೃಜನಾತ್ಮಕತೆಯನ್ನು ವೃದ್ಧಿಸುತ್ತದೆ. ಮಿತವ್ಯಯ ಸಾಮಾಗ್ರಿಗಳನ್ನು ಬಳಸಿಕೊಂಡು ಗುಣಮಟ್ಟದ ಆಕರ್ಷಕ, ಮನಮೋಹಕ ಕುಶಲತೆಯ ಪರಿಕರಗಳನ್ನು ಸೃಜಿಸುವುದು ಕ್ರಾಫ್ಟಿನ ಪ್ರಮುಖ ಧ್ಯೇಯವಾಗಿದೆ ಎಂದು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ತಾಲ್ಲೂಕು ಅಧ್ಯಕ್ಷೆ ಕೆ.ಸಿ. ಗೀತಾ ಅಭಿಪ್ರಾಯಪಟ್ಟರು.

ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ತಾಲ್ಲೂಕು ಘಟಕ ಹಾಗೂ ಭಾರತ್ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ಜಿಲ್ಲಾ ಸ್ಕೌಟ್ಸ್-ಗೈಡ್ಸ್ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದ ಬೇಸಿಗೆ ಶಿಬಿರದಲ್ಲಿ ಮಕ್ಕಳಿಗೆ ಕ್ರಾಫ್ಟ್ ತರಗತಿ ನೀಡಿ ಮಾತನಾಡಿ, ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಪ್ರತಿವರ್ಷ ಹೊಸ ಪ್ರತಿಭೆಗಳ ಹುಡಕಾಟದಲ್ಲಿ ತೊಡಗಿಸಿಕೊಂಡು ಅದರಲ್ಲೂ ವಿದ್ಯಾರ್ಥಿ ಮತ್ತು ಯುವಜನರಲ್ಲಿ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ, ಧಾರ್ಮಿಕ ಮೌಲ್ಯಗಳನ್ನು ಬಿತ್ತುವ ನಿಟ್ಟಿನಲ್ಲಿ ಕಳೆದ ಏಳೆಂಟು ವರ್ಷಗಳಿಂದ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಬಳಸಿಕೊಂಡು ವಿಭಿನ್ನವಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇವೆ ಎಂದರು.

ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ. ಪ್ರಿಯಾಂಕ ಮಾತನಾಡಿ, ಪ್ರತಿವರ್ಷ ಎರಡೂ ಸಂಸ್ಥೆಗಳಿದ ಬೇಸಿಗೆ ಶಿಬಿರವನ್ನು ಆಯೋಜನೆ ಮಾಡುತ್ತಿದ್ದು ಹೊಸ ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುತ್ತಿದ್ದೇವೆ. ಮಕ್ಕಳು ಕೇವಲ ಪಠ್ಯಕ್ಕೆ ಮಾತ್ರ ಸೀಮಿತಗೊಳ್ಳದೇ ಪಠ್ಯೇತರ ಚಟವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ತಿಪಟೂರು ತಾಲ್ಲೂಕು ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಅಧ್ಯಕ್ಷೆ ಲತಾಮಣಿ ಎಂ.ಕೆ. ತುರುವೇಕೆರೆ, ಪ್ರತಿಮಾ ಸಾಂಸ್ಕೃತಿಕ ಹಾಗೂ ಸಾಮಾಜಿಕ ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷೆ ಎಚ್.ಎಸ್. ಪ್ರತಿಮಾ, ಯೋಗಶಿಕ್ಷಕಿ ಗಿರಿಜಾ ನಿರ್ವಾಣಿ, ಗೈಡ್ ಕ್ಯಾಪ್ಟನ್ ಅಶ್ವಿನಿ ಭೈರಾಪುರ, ಗೈಡ್ ಕ್ಯಾಪ್ಟನ್ ಶ್ರೀ, ಲೇಡಿ ಸ್ಕೌಟ್ ಮಾಸ್ಟರ್ ರೇಣುಕಾ ಭೈರಾಪುರ, ಜಿಲ್ಲಾ ಖಜಾಂಚಿ ಆರ್. ಎಸ್. ರಮೇಶ್ ಸೇರಿದಂತೆ 50ಕ್ಕೂ ಹೆಚ್ಚು ಶಿಬಿರಾರ್ಥಿಗಳು ಹಾಜರಿದ್ದರು.

# ಅಸಮರ್ಪಕ ವಿದ್ಯುತ್ ಪೂರೈಕೆ ಖಂಡಿಸಿ ರೈತರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜಾವಗಲ್: ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟ ದೊಡ್ಡಘಟ್ಟ ಹೊಸೂರು ರೈತರಿಗೆ ನಾಲ್ಕು ದಿನದಿಂದ ಸರಿಯಾಗಿ ವಿದ್ಯುತ್ ನೀಡದೆ ಬೆಳೆ ಒಳಗುವ ಆತಂಕ ಕಾಡುತಿದೆ ಎಂದು ಆರೋಪಿಸಿ ರೈತರು ಸೆಸ್ಕ್ ಉಪ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಯುವ ರೈತ ಸುನಿಲ್ ಮಾತನಾಡಿ, ಕಳೆದ 1 ತಿಂಗಳಿಂದಲು ಸಂಭಂದಪಟ್ಟ ಇಲಾಖೆ ಅಧಿಕಾರಿ ರಮೇಶ್ ರವರಿಗೆ ಸಾಕಷ್ಟು ಬಾರಿ ಮನವಿ ಮಾಡಿದರು ಸಮಸ್ಯೆ ಬಗೆಹರಿಸದೆ

ಕಾಲಹರಣ ಮಾಡಿದ್ದು ಒಂದು ವಾರದಿಂದ ವಿದ್ಯುತ್ ಸಮಸ್ಯೆ ಹೆಚ್ಚಾಗಿದೆ. ಈಗಾಗಲೇ ರೈತರು

ಹತ್ತಿ, ಶುಂಠಿ, ಟೊಮೋಟೋ, ಬಾಳೆ ಸೇರಿ ಅನೇಕ ಬೆಳೆಗಳನ್ನು ಮಾಡಿದ್ದು ಬೆಳೆ ಉಳಿಸಿಕೊಳ್ಳಲು

ಪರದಾಡುವಂತಾಗಿದೆ. ಕೂಡಲೇ ಸರಿಪಡಿಸದಿದ್ದರೆ ಲಕ್ಷಾಂತರ ರೂಪಾಯಿ ಬೆಳೆ ನಷ್ಟವಾಗಿ ರೈತರು ಭೀದಿಗೆ ಬೀಳುವ




ಪರಿಸ್ಥಿತಿ ನಿರ್ಮಾಣ ಆಗುವ ಆತಂಕ ವ್ಯಕ್ತಪಡಿಸಿದರು.

ರೈತ ದೊಡ್ಡಘಟ್ಟ ದಿನೇಶ್ ಮಾತನಾಡಿ, 20ಕ್ಕೂ ಹೆಚ್ಚು ತೋಟದ ಮನೆಗಳಿದ್ದು ಒಂದು ವಾರದಿಂದ ಸರಿಯಾಗಿ ವಿದ್ಯುತ್ ಇಲ್ಲದೆ ಕುಡಿಯವ ನೀರಿಗೆ ಸಮಸ್ಯೆ ಆಗಿದೆ ರಾತ್ರಿ ವೇಳೆ ಕಾಡು ಪ್ರಾಣಿಗಳ ಕಾಟ ಮನೆಯಲ್ಲಿರುವ ರೈತ ಕುಟುಂಬಗಳು ಆತಂಕಕ್ಕೆ ಒಳಗಾಗಿವೆ ಅಲ್ಲದೆ ಎರಡು ಊರಿನ ವಿದ್ಯುತ್ ಲೈನ್ ಗಳು ಅನೇಕ ಕಡೆ ಜೋತು ಬಿದ್ದಿದ್ದು ಸರಿಪಡಿಸಲು ಲೈನ್ ಮ್ಯಾನ್ ಗೆ ತಿಳಿಸಿದರೆ ಸಾವಿರಾರು ರೂ ಲಂಚಕ್ಕೆ ಬೇಡಿಕೆ ಇಡುತ್ತಾರೆ ಎಂದು ದೂರಿದರು.

ವಿದ್ಯುತ್ ಇಲಾಖೆ ಸಿಬ್ಬಂದಿ ಸುಶೀಲ ಅವರಿಗೆ ಸಮಸ್ಯೆಯ ಬಗ್ಗೆ ತಿಳಿಸಿ ಕೂಡಲೇ ವಿದ್ಯುತ್ ಸಮಸ್ಯೆ ಬಗೆಹರಿಸದಿದ್ದರೆ. ಇಲಾಖೆಯ ಬಾಗಿಲಿಗೆ ಬೀಗ ಹಾಕಿ ಪ್ರತಿಭಟಿಸುವುದಾಗಿ ಎಚ್ಚರಿಕೆ ನೀಡಿ ಗ್ರಾಮದ ರೈತರು ಮನವಿಪತ್ರ ನೀಡಿದರು.

ಗ್ರಾಪಂ ಮಾಜಿ ಸದಸ್ಯ ಲಕ್ಷಣ್ ಗೌಡ, ರಾಜೇಗೌಡ, ರೈತ ಮೋಹನ್, ರಮೇಶ್, ಜಗದೀಶ್ ರಾಕೇಶ್ ಪ್ರವೀಣ್ ಮತ್ತಿತರರು ಇದ್ದರು.

# ಬಾಗೆ ಜೆಎಸ್‌ಎಸ್ ಶಾಲೆಗೆ ಶೇ. 100 ಫಲಿತಾಂಶ

ಸಕಲೇಶಪುರ: ತಾಲ್ಲೂಕಿನ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯು 2026ನೇ ಸಾಲಿನ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಸತತ 17ನೇ ವರ್ಷವೂ ಶೇ. 100 ರಷ್ಟು ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾಗಿದ್ದ 84 ವಿದ್ಯಾರ್ಥಿಗಳಲ್ಲಿ 57 ಮಕ್ಕಳು ಅತ್ಯುನ್ನತ ಶ್ರೇಣಿಯಲ್ಲಿ (ಡಿಸ್ಟಿಂಕ್ಷನ್) ಹಾಗು 27 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯ ಶಿಸ್ತುಬದ್ಧ ಶಿಕ್ಷಣ ಹಾಗೂ ವಿದ್ಯಾರ್ಥಿಗಳ ಪರಿಶ್ರಮದಿಂದಾಗಿ ಸಾಧನೆ ಸಾಧ್ಯವಾಗಿದೆ ಎಂದು ಮಂಡಳಿಯು ಹರ್ಷ ವ್ಯಕ್ತಪಡಿಸಿದೆ.

ಸಾಧನೆ ಮಾಡಿದ ಪ್ರಮುಖ ವಿದ್ಯಾರ್ಥಿಗಳಲ್ಲಿ ಧೂಪ (ಶೇ.95.4), ತಕ್ಷಾ ಜೈನ್ (ಶೇ.94.6), ಕುಲ್ಸುಮ್ ಫರ್ಹಾನ್ (ಶೇ.94), ಕೆ.ಟಿ. ಸಾಧನ (ಶೇ.94), ಹೆಚ್.ಡಿ.ಯುಕ್ತಾ (ಶೇ.94), ಜಿ.ಡಿ. ಲಿಖಿತ್ ಪಟೇಲ್ (ಶೇ. 93.6), ನೈಲ ಅಬ್ದುಲ್ ಮುನಫ್ (ಶೇ.93.6), ಜೋಯಲ್ ಜೋಸೆಫ್ (ಶೇ.92.8), ಎ.ವಿ. ಹರ್ಷಿತಾ (ಶೇ.92.6), ಶಾರ್ವಿಕಾ ಎ. ಬೆಳ್ಳೂರು (ಶೇ.92.6), ಬಿ.ಎಲ್. ಪ್ರೇರಣ್ (ಶೇ. 92.4), ಆದ್ಯ ಚೇತನ್ (ಶೇ.92.2), ಬಿ.ಜಿ.ವಿನಾಯಕ (ಶೇ.92), ಬಿ.ಎಂ.ವರ್ಷಿತಾ (ಶೇ.91.4), ಕೆ.ಕೆ. ರಿಷಿಕಾ (ಶೇ.91.2), ಎ.ಕೆ.ತೇಜಸ್ (ಶೇ. 90.4), ಆರುಷ್ ವಿ. ಬಾಳ್ಳು (ಶೇ. 90) ಹಾಗು ಬಿ.ವಿ.ಜೀವಿತಾ (ಶೇ. 90) ಅಂಕ ಗಳಿಸಿ ಸಾಧನೆ ಮಾಡಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನು ಪ್ರಾಂಶುಪಾಲ ಬಿ.ಮಧುಕುಮಾರ್ ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-18

1906: ಅಮೆರಿಕದ ಕ್ಯಾಲಿಫೋರ್ನಿಯಾದ an Francisco ನಗರದಲ್ಲಿ ಭೀಕರ ಭೂಕಂಪ ಸಂಭವಿಸಿ ಸಾವಿರಾರು ಜನರು ಸಾವನ್ನಪ್ಪಿದರು, ನಗರ ಬಹುತೇಕ ನಾಶವಾಯಿತು.

1942: ದ್ವಿತೀಯ ವಿಶ್ವಯುದ್ಧದ ವೇಳೆ ಅಮೆರಿಕಾ ಜಪಾನ್ ಮೇಲೆ ನಡೆಸಿದ ಪ್ರಸಿದ್ಧ Doolittle Raid ದಾಳಿ ನಡೆಯಿತು.

1980: Zimbabwe ದೇಶವು ಬ್ರಿಟನ್‌ನಿಂದ ಸ್ವಾತಂತ್ರ್ಯ ಪಡೆದುಕೊಂಡಿತು.

2008: ಭಾರತ ತನ್ನ ಮೊದಲ ಮಾನವ ರಹಿತ ಚಂದ್ರಯಾನ ಯೋಜನೆ -1 ಅನ್ನು ಇದೇ ದಿನ ಯಶಸ್ವಿಯಾಗಿ ಪ್ರಾರಂಭಿಸಿತು.

**ಜನನ**

1859: ಕ್ರಿಕೆಟ್ ಕ್ರೀಡೆಯನ್ನು ಅಭಿವೃದ್ಧಿಪಡಿಸಿದ ಬ್ರಿಟಿಷ್ ಆಡಳಿತಗಾರ Lord Harris

**ಮರಣ**

1955: ಪ್ರಸಿದ್ಧ ವಿಜ್ಞಾನಿ Albert Einstein

# ಕಾಟಾಚಾರದ ಕುಂದು ಕೊರತೆ ಸಭೆ: ಸೆಸ್ಕ್ ವಿರುದ್ಧ ಪ್ಲಾಂಟರ್ಸ್ ಸಂಘ ಆಕ್ರೋಶ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಪ್ರತಿ ಆರು ತಿಂಗಳಿಗೊಮ್ಮೆ ಗ್ರಾಹಕರ ಕುಂದು ಕೊರತೆ ಸಭೆ ನಡೆಸುವುದು ಸರ್ಕಾರದ ನಿಯಮವಾಗಿದ್ದರೂ ಸಕಲೇಶಪುರ ಸೆಸ್ಕ್ ಅಧಿಕಾರಿಗಳು ಕಳೆದ ಹಲವು ವರ್ಷಗಳಿಂದ ಯಾವುದೇ ಸಭೆ ನಡೆಸದೆ ಗ್ರಾಹಕರ ಸಮಸ್ಯೆಗಳನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂದು ಜಿಲ್ಲಾ ಪ್ಲಾಂಟರ್ಸ್ ಸಂಘ ಆರೋಪಿಸಿದೆ.

ಕಳೆದ ಜನವರಿಯಲ್ಲಿ ಜಿಲ್ಲಾಧಿಕಾರಿ ಗಮನಕ್ಕೆ ವಿಷಯ ತರಲಾಗಿತ್ತು. ಜಿಲ್ಲಾಧಿಕಾರಿ ಸೆಸ್ಕ್ ಅಧಿಕಾರಿಗಳಿಗೆ ಸಭೆ ಕರೆಯುವಂತೆ ನಿರ್ದೇಶನ ನೀಡಿದ್ದರೂ, ಅಧಿಕಾರಿಗಳು ನಿರ್ಲಕ್ಷ್ಯಭಾವದಿಂದ ವರ್ತಿಸಿ ಉಡಾಫೆಯ ಉತ್ತರ ನೀಡುತ್ತಿದ್ದಾರೆ ಎಂಬುದು ಸಂಘದ ಆರೋಪ.

ಏ. 15ರಂದು ಯಾವುದೇ ಸ್ಥಳವನ್ನು ನಿಗದಿ ಮಾಡದೆ, ಏ. 16ರಂದು ಸಂಜೆ 4.30ಕ್ಕೆ ಗ್ರಾಹಕರ ಕುಂದು ಕೊರತೆ ಸಭೆ ನಡೆಯಲಿದೆ ಎಂದು ಪತ್ರ ಕಳುಹಿಸಿರುವುದು ಅಧಿಕಾರಿಗಳ ಬೇಜವಾಬ್ದಾರಿತನವನ್ನು ಸ್ಪಷ್ಟಪಡಿಸುತ್ತದೆ.

ನಿಯಮಾನುಸಾರ ಇಂತಹ ಸಭೆಗಳ ಬಗ್ಗೆ ಕನಿಷ್ಟ ಏಳು ದಿನಗಳ ಮುಂಚೆಯೇ ನೋಟಿಸ್ ನೀಡಬೇಕು. ಜೊತೆಗೆ ಸ್ಥಳೀಯ ದಿನಪತ್ರಿಕೆಗಳಲ್ಲಿ ಸಭೆಯ ಮಾಹಿತಿ ಪ್ರಕಟಿಸಿ, ಸಭೆಯ ಸ್ಥಳವನ್ನು ಸ್ಪಷ್ಟವಾಗಿ ತಿಳಿಸುವುದು ಅಧಿಕಾರಿಗಳ ಕರ್ತವ್ಯವಾಗಿದೆ. ಆದರೆ ಈ ಎಲ್ಲ ನಿಯಮಗಳನ್ನು ಲೆಕ್ಕಿಸದೇ ಅಧಿಕಾರಿಗಳು ವರ್ತಿಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಇನ್ನೂ 15 ದಿನಗಳ ಒಳಗಾಗಿ ಸಮರ್ಪಕವಾಗಿ ಕುಂದು ಕೊರತೆ ಸಭೆ ಕರೆಯದಿದ್ದರೆ, ಇಂಧನ ಸಚಿವರ ಕಚೇರಿ ಎದುರು ಧರಣಿ ನಡೆಸಲಾಗುವುದು ಎಂದು ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಗೌರವ ಕಾರ್ಯದರ್ಶಿ ಲೋಹಿತ್ ಕೌಡಳ್ಳಿ ಎಚ್ಚರಿಕೆ ನೀಡಿದ್ದಾರೆ.

## ಗಾನ ವೇದಿಕೆಯಲ್ಲಿ ಪುಟ್ಟ ಗಾಯಕರ ವೈಭವ : ಸರಿಗಮಪ ಲಿಟಲ್ ಚಾಂಪ್ಸ್

# ಇದೇ ಏಪ್ರಿಲ್ 18 ರಿಂದ ಜೀ ಕನ್ನಡ ವಾಹಿನಿಯಲ್ಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಕಾರ್ಯಕ್ರಮದ ಅಭೂತಪೂರ್ವ ಯಶಸ್ಸಿನ ನಂತರ, ಜೀ ಕನ್ನಡ ವಾಹಿನಿಯು ಈಗ ಸಂಗೀತದ ಮಾಯಾಲೋಕವನ್ನು ಮರಳಿ ತರಲು ಸಜ್ಜಾಗಿದೆ. ಅಸಾಧಾರಣ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವಲ್ಲಿ ಹೆಸರುವಾಸಿಯಾದ ಜನಪ್ರಿಯ ಗಾಯನ ರಿಯಾಲಿಟಿ ಶೋ ಜಿಸರಿಗಮಪ ಲಿಟಲ್ ಚಾಂಪ್ಸ್, ಮತ್ತೊಮ್ಮೆ ಪ್ರೇಕ್ಷಕರನ್ನು ರಂಜಿಸಲು ಸಿದ್ಧವಾಗಿದೆ. 3 ರಿಂದ 15 ವರ್ಷದೊಳಗಿನ ಪುಟಾಣಿ ಪ್ರತಿಭೆಗಳು ಭಾಗವಹಿಸುವ ಈ ಸೀಸನ್, ಕರ್ನಾಟಕದ ಮೂಲೆ ಮೂಲೆಯ ಕಿರಿಯ ಗಾಯಕರ ಅದ್ಭುತ ಪ್ರದರ್ಶನಗಳು ಮತ್ತು ಮರೆಯಲಾಗದ ಸಂಗೀತದ ಕ್ಷಣಗಳಿಗೆ ಸಾಕ್ಷಿಯಾಗಲಿದೆ.

ಜಿಸರಿಗಮಪ ಲಿಟಲ್ ಚಾಂಪ್ಸ್ ಈ ಏಪ್ರಿಲ್ 18ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 7:30ಕ್ಕೆ ಪ್ರಸಾರವಾಗಲಿದೆ. ಈ ಸೀಸನ್ ನಲ್ಲಿ ಅಪ್ರತಿಮ ಪ್ರತಿಭೆ ಹೊಂದಿರುವ ಪುಟ್ಟ ಗಾಯಕರು ತಮ್ಮ ಧ್ವನಿಯ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಲಿದ್ದಾರೆ. ಮನೋರಂಜನೆ ಮತ್ತು ಭಾವನೆಗಳ ಸಮ್ಮಿಶ್ರಣವಾಗಿರುವ ಈ ಕಾರ್ಯಕ್ರಮವು, ಉದಯೋನ್ಮುಖ ಗಾಯಕರಿಗೆ ಭವ್ಯ ವೇದಿಕೆಯನ್ನು ಕಲ್ಪಿಸಿಕೊಡುವುದರ ಜೊತೆಗೆ




ಸಂಗೀತದ ಸಂಭ್ರಮವನ್ನು ಆಚರಿಸಲಿದೆ.ಈ ಬಾರಿಯೂ ಕನ್ನಡಿಗರ ನೆಚ್ಚಿನ ಗಾಯಕರಾದ ರಾಜೇಶ್ ಕೃಷ್ಣನ್, ಮ್ಯೂಸಿಕ್ ಡೈರೆಕ್ಟರ್ ಅರ್ಜುನ್ ಜನ್ಯ ಮತ್ತು ಎಲ್ಲರ ಫೇವರಿಟ್ ವಿಜಯ್ ಪ್ರಕಾಶ್ ಅವರು ತೀರ್ಪುಗಾರರಾಗಿದ್ದು ಸ್ಪರ್ಧಿಗಳಿಗೆ ಮಾರ್ಗದರ್ಶನ ನೀಡಲಿದೆ. ತಮ್ಮ ಅಪಾರ ಅನುಭವದ ಮೂಲಕ ಪುಟಾಣಿ ಪ್ರತಿಭೆಗಳು ವೇದಿಕೆಯ ಮೇಲೆ ಮಿಂಚಲು ಇವರು ಸ್ಫೂರ್ತಿಯಾಗಲಿದ್ದಾರೆ. ಜನಪ್ರಿಯ ನಿರೂಪಕಿ ಅನುಶ್ರೀ ಅವರು ತಮ್ಮ ನಿರೂಪಣೆ ಮೂಲಕ ಕಾರ್ಯಕ್ರಮಕ್ಕೆ ಮತ್ತಷ್ಟು ಮೆರುಗು ಮತ್ತು ಚೈತನ್ಯ ನೀಡಲಿದ್ದಾರೆ.

ಟೆಲಿವಿಷನ್ ಮಾತ್ರವಲ್ಲದೆ, ಜೀ ಕನ್ನಡದ ಸಾಮಾಜಿಕ ಜಾಲತಾಣಗಳ ಮೂಲಕವೂ ವೀಕ್ಷಕರು ತೆರೆಯ ಹಿಂದಿನ ಕ್ಷಣಗಳು, ಸ್ಪರ್ಧಿಗಳ ಪಯಣ ಮತ್ತು ಹಾಸ್ಯ ಸನ್ನಿವೇಶಗಳ ತುಣುಕುಗಳನ್ನು ಆನಂದಿಸಬಹುದು. ಪ್ರಾಕ್ಟೀಸ್ ನಿಂದ ಹಿಡಿದು ತೀರ್ಪುಗಾರರ ಸಹಜ ಪ್ರತಿಕ್ರಿಯೆಗಳವರೆಗೆ ಎಲ್ಲವನ್ನೂ ಒಳಗೊಂಡ ಈ ವಿಡಿಯೋ ಗಳು ಅಭಿಮಾನಿಗಳನ್ನು ಈ ರಿಯಾಲಿಟಿ ಶೋ ಗೆ ಮತ್ತಷ್ಟು ಹತ್ತಿರವಾಗಿಸಲಿದೆ.

ಕರ್ನಾಟಕದ ಮುಂದಿನ ಸಿಂಗಿಂಗ್ ಸೂಪರ್ ಸ್ಟಾರ್ ಆಯ್ಕೆಯಾಗುವ ಈ ಸುಂದರ ಕ್ಷಣಕ್ಕೆ ನೀವು ಕೂಡ ಸಾಕ್ಷಿಯಾಗಿ. ಸಂಗೀತ, ಪ್ರತಿಭೆ ಮತ್ತು ಕನಸುಗಳ ಈ ಸಂಭ್ರಮವು ಸಂಗೀತ ಪ್ರಿಯರಿಗೆ ಮರೆಯಲಾಗದ ನೆನಪುಗಳನ್ನು ಸೃಷ್ಟಿಸಲಿದೆ.ತಪ್ಪದೇ ನೋಡಿ, ಜಿಸರಿಗಮಪ ಲಿಟಲ್ ಚಾಂಪ್ಸ್ ಏಪ್ರಿಲ್ 18ರಿಂದ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 7:30ಕ್ಕೆ, ಕೇವಲ ನಿಮ್ಮ ಜೀ ಕನ್ನಡದಲ್ಲಿ!

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248